ವಿಜಯವಾಣಿ

ಶುಕ್ರವಾರ 3 ಡಿಸೆಂಬರ್ 2021
3 DECEMBER 2021

# ಕೆಎಂಸಿಯಲ್ಲಿ ಇಂಟರ್‌ವೆನ್ಶನಲ್ ರೇಡಿಯಾಲಜಿ



ಕಸ್ತೂರ್ಬಾ ವೈದ್ಯಕೀಯ ಆಸ್ಪತ್ರೆಯಲ್ಲಿ ಇಂಟರ್‌ವೆನ್ಶನಲ್ ರೇಡಿಯಾಲಜಿ ವಿಭಾಗವನ್ನು ಡಾ.ಎಚ್.ಎಸ್. ಬಲ್ಲಾಳ್ ಉದ್ಘಾಟಿಸಿದರು. ಡಾ. ಪ್ರಕಾಶಿನಿ, ಕಸ್ತೂರ್ಬಾ ಆಸ್ಪತ್ರೆಯ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ ಇದ್ದರು.

**ಉಡುಪಿ:** ಇಂಟರ್‌ವೆನ್ಶನಲ್ ರೇಡಿಯಾಲಜಿ ವಿಕಿರಣ ಶಾಸ್ತ್ರದ ವಿಶೇಷತೆ ಆಗಿದ್ದು, ಪ್ರತಿಯೊಂದು ಅಂಗ ವ್ಯವಸ್ಥೆಯಲ್ಲಿನ ರೋಗಗಳನ್ನು ಪತ್ತೆಹಚ್ಚಲು ಮತ್ತು ಕನಿಷ್ಠ ಗಾಯದಲ್ಲಿ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ದೇಹದ ಆಳವಾದ ರಚನೆಗಳನ್ನು ರಂಧ್ರ ಅಥವಾ ಸಣ್ಣ ಸೂಜಿ ಬಳಸಿಕೊಂಡು ಸಣ್ಣ ಛೇದನದ ಮೂಲಕ ತಲುಪಬಲ್ಲದು ಎಂದು ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಹೇಳಿದರು.

ಕಸ್ತೂರ್ಬಾ ವೈದ್ಯಕೀಯ ಆಸ್ಪತ್ರೆಯಲ್ಲಿ ಗುರುವಾರ ಇಂಟರ್‌ವೆನ್ಶನಲ್ ರೇಡಿಯಾಲಜಿ ವಿಭಾಗ ಉದ್ಘಾಟಿಸಿ ಮಾತನಾಡಿದರು.

ರೇಡಿಯಾಲಜಿ ವಿಭಾಗದ ಮುಖ್ಯಸ್ಥೆ ಡಾ. ಪ್ರಕಾಶಿನಿ ಮಾತನಾಡಿ, ಇಂಟರ್‌ವೆನ್ಶನಲ್ ರೇಡಿಯಾಲಜಿ (ಐಆರ್) ಕಾರ್ಯವಿಧಾನಗಳು ಶಸ್ತ್ರಚಿಕಿತ್ಸೆಗೆ ಪರ್ಯಾಯ ಚಿಕಿತ್ಸೆಯಾಗಿ ವಿಕಸನಗೊಂಡಿವೆ. ಕ್ಯಾನ್ಸರ್‌ಗೆ ಇತ್ತೀಚಿನ ಅತ್ಯಾಧುನಿಕ ಚಿಕಿತ್ಸೆಯಲ್ಲಿ ಔಷಧವನ್ನು ನೇರವಾಗಿ ಅಪಧಮನಿಗಳ ಮೂಲಕ ಗೆಡ್ಡೆಗೆ ತಲುಪಿಸಲಾಗುತ್ತದೆ. ಇದರಿಂದಾಗಿ ವ್ಯವಸ್ಥಿತ ಅಡ್ಡ ಪರಿಣಾಮಗಳನ್ನು ತಪ್ಪಿಸುತ್ತದೆ. ಉಬ್ಬಿರುವ ರಕ್ತನಾಳಗಳನ್ನು ಶಸ್ತ್ರಚಿಕಿತ್ಸೆಯಿಲ್ಲದೆ ಚಿಕಿತ್ಸೆ ನೀಡಬಹುದು. ಶೂನ್ಯ ರಕ್ತ ನಷ್ಟ ಚಿಕಿತ್ಸೆಯಾಗಿದ್ದು, ಆಸ್ಪತ್ರೆಯಲ್ಲಿ ಉಳಿದುಕೊಳ್ಳುವ ಅಗತ್ಯವಿಲ್ಲ ಎಂದರು.

ಕಸ್ತೂರ್ಬಾ ಆಸ್ಪತ್ರೆಯ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಕೆಎಂಸಿ ಮಂಗಳೂರಿನ ವೈದ್ಯಕೀಯ ಅಧೀಕ್ಷಕ ಡಾ.ಆನಂದ ವೇಣುಗೋಪಾಲ್ , ಮಂಗಳೂರು ವಲಯದ ನಿರ್ವಹಣಾಧಿಕಾರಿ ಸಗೀರ್ ಸಿದ್ದಿಕಿ, ಇಂಟರ್‌ವೆನ್ಶನಲ್ ರೇಡಿಯಾಲಜಿಸ್ಟ್ ಡಾ. ಕೀರ್ತಿರಾಜ್ ಉಪಸ್ಥಿತರಿದ್ದರು.

# ಕೆಎಂಸಿಯಲ್ಲಿ ಇಂಟರ್ವೆನ್ಷನಲ್ ರೇಡಿಯಾಲಜಿ ವಿಭಾಗ ಆರಂಭ

KP



ಇಂಟರ್ವೆನ್ಷನಲ್ ರೇಡಿಯಾಲಜಿ ವಿಭಾಗವನ್ನು ಮಾಹೆಯ ಸಹಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಕಸ್ತೂರ್ಬಾ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಇಂಟರ್ವೆನ್ಷನಲ್ ರೇಡಿಯಾಲಜಿ ವಿಭಾಗವನ್ನು ಮಾಹೆಯ ಸಹಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಇಂಟರ್ವೆನ್ಷನಲ್ ರೇಡಿಯಾಲಜಿ ವೈದ್ಯಕೀಯ ವಿಶೇಷತೆಯಾಗಿದ್ದು, ಈ ತಂತ್ರಜ್ಞಾನವು ದೇಹದ ಆಳವಾದ ರಚನೆಗಳಲ್ಲಿ ರೋಗವನ್ನು ಪತ್ತೆ ಹಚ್ಚಿ ಕನಿಷ್ಟ ಗಾಯದ ಮೂಲಕ ಸಣ್ಣ ಸೂಜಿ ಅಥವಾ ತಂತಿಗಳನ್ನು ಬಳಸಿಕೊಂಡು ಚಿಕಿತ್ಸೆ ನೀಡುವುದಕ್ಕೆ ಸಹಾಯ ಮಾಡಬಲ್ಲುದು ಎಂದರು.

ರೇಡಿಯೋಲೋಜಿ ವಿಭಾಗ ಮುಖ್ಯಸ್ಥೆ ಡಾ.ಪ್ರಕಾಶಿನಿ ಇಂಟರ್ವೆನ್ಷನಲ್ ರೇಡಿಯಾಲಜಿ ಕುರಿತು ವಿವರ ನೀಡುತ್ತಾ, ಈ ತಂತ್ರಜ್ಞಾನವು ರಕ್ತ ನಷ್ಟ, ತೆರೆದ ಶಸ್ತ್ರಚಿಕಿತ್ಸೆ, ಶಸ್ತ್ರಚಿಕಿತ್ಸೆ ನಂತರದ ತೊಡಕು ಮತ್ತು ರೋಗದ ತೀವ್ರತೆಯನ್ನು, ಅಡ್ಡಪರಿಣಾಮಗಳನ್ನು ಕಡಿಮೆ ಮಾಡುತ್ತವೆ ಎಂದರು.

ಈ ಸಂದರ್ಭ ಆಸ್ಪತ್ರೆಯ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಕೆಎಂಸಿ ಮಂಗಳೂರಿನ ವೈದ್ಯಕೀಯ ಅಧೀಕ್ಷಕ ಡಾ.ಆನಂದ ವೇಣುಗೋಪಾಲ್, ಮಂಗಳೂರು ವಲಯ ನಿರ್ವಹಣಾಧಿಕಾರಿ ಸಗೀರ್ ಸಿದ್ದಿಕಿ, ಇಂಟರ್ವೆನ್ಷನಲ್ ರೇಡಿಯಾಲಜಿಸ್ಟ್ ಡಾ.ಕೀರ್ತಿರಾಜ್ ಉಪಸ್ಥಿತರಿದ್ದರು.

ಕನ್ನಡಪ್ರಭ Fri, 03 December 2021
https://kpepaper.asianetnews.com/c/64725825

ಪ್ರಜಾವಾಣಿ ಶುಕ್ರವಾರ • ಡಿಸೆಂಬರ್ 3, 2021

## ಮಣಿಪಾಲದ ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ

# ಇಂಟರ್ವೆನ್ಷನಲ್ ರೇಡಿಯಾಲಜಿ

ಪ್ರಜಾವಾಣಿ ವಾರ್ತೆ



ಮಣಿಪಾಲದ ಕಸ್ತೂರಬಾ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಗುರುವಾರ ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಇಂಟರ್ವೆನ್ಷನಲ್ ರೇಡಿಯಾಲಜಿ ವಿಭಾಗವನ್ನು ಉದ್ಘಾಟಿಸಿದರು.

ಉಡುಪಿ: ಮಣಿಪಾಲದ ಕಸ್ತೂರಬಾ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಗುರುವಾರ ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್.ಬಲ್ಲಾಳ್ ಇಂಟರ್ವೆನ್ಷನಲ್ ರೇಡಿಯಾಲಜಿ ವಿಭಾಗವನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿ, 'ಇಂಟರ್ವೆನ್ಷನಲ್ ರೇಡಿಯಾಲಜಿ ತಂತ್ರಜ್ಞಾನವು ವಿಕಿರಣ ಶಾಸ್ತ್ರದ ವೈದ್ಯಕೀಯ ವಿಶೇಷತೆಯಾಗಿದ್ದು, ಮನುಷ್ಯನ ಪ್ರತಿ ಅಂಗ ವ್ಯವಸ್ಥೆಯಲ್ಲಿನ ರೋಗಗಳನ್ನು ಪತ್ತೆಹಚ್ಚಿ ಚಿಕಿತ್ಸೆ ನೀಡಲು ಸಹಕಾರಿಯಾಗಿದೆ. ದೇಹದ ಆಳವಾದ ರಚನೆಗಳಲ್ಲಿ ರಂಧ್ರ ಅಥವಾ ಸಣ್ಣ ಸೂಜಿ, ತಂತಿಗಳನ್ನು ಬಳಸಿ, ಸಣ್ಣ ಛೇದನದ ಮೂಲಕ ಇಂಟರ್ವೆನ್ಷನಲ್ ರೇಡಿಯಾಲಜಿ ತಂತ್ರಜ್ಞಾನ ಬಳಸಿಕೊಂಡು ಪರಿಣಾಮಕಾರಿ ಚಿಕಿತ್ಸೆ ನೀಡಬಹುದು ಎಂದರು.

ರೇಡಿಯಾಲಜಿ ವಿಭಾಗದ ಮುಖ್ಯಸ್ಥೆ ಡಾ. ಪ್ರಕಾಶಿನಿ ಮಾತನಾಡಿ, 'ಇಂಟರ್ವೆನ್ಷನಲ್ ರೇಡಿಯಾಲಜಿ (ಐಆರ್) ಕಾರ್ಯವಿಧಾನಗಳು ಶಸ್ತ್ರಚಿಕಿತ್ಸೆಗೆ ಪರ್ಯಾಯ ಚಿಕಿತ್ಸೆಯಾಗಿ ವಿಕಸನಗೊಂಡಿವೆ. ಈ ತಂತ್ರಜ್ಞಾನ ಬಳಸಿಕೊಂಡು ರಕ್ತ ನಷ್ಟ, ತೆರೆದ ಶಸ್ತ್ರಚಿಕಿತ್ಸೆ, ಶಸ್ತ್ರಚಿಕಿತ್ಸೆಯ ನಂತರದ ತೊಡಕುಗಳು ಮತ್ತು ರೋಗದ ತೀವ್ರತೆಯನ್ನು ತಪ್ಪಿಸಬಹುದು ಎಂದರು.

ಅನ್ಯೂರಿಮ್‌ನಿಂದ ಉಂಟಾಗುವ ಸೆರೆಬ್ರಲ್ ಹೆಮರೇಜ್‌ಗೆ ಸುರುಳಿಯಾಕಾರದ ಮೂಲಕವೂ ಚಿಕಿತ್ಸೆ ನೀಡಬಹುದು. ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ತಪ್ಪಿಸಬಹುದು. ಕ್ಯಾನ್ಸರ್ ರೋಗಗಳಲ್ಲಿ ಈಚೆಗಿನ ಅತ್ಯಾಧುನಿಕ ಚಿಕಿತ್ಸೆಯಲ್ಲಿ ಔಷಧವನ್ನು ನೇರವಾಗಿ ಅಪಧಮನಿಗಳ ಮೂಲಕ ಗಡ್ಡೆಗೆ ತಲುಪಿಸಲಾಗುತ್ತದೆ. ಇದರಿಂದಾಗಿ ಅಡ್ಡ ಪರಿಣಾಮಗಳನ್ನು ತಪ್ಪಿಸಬಹುದು ಎಂದರು.

ವಿಕಿರಣಶಾಸ್ತ್ರ ವಿಭಾಗದಲ್ಲಿ ಇಂಟರ್ವೆನ್ಷನಲ್ ರೇಡಿಯಾಲಜಿಯ ವಿಭಾಗವನ್ನು ಸ್ಥಾಪಿಸಲಾಗಿದ್ದು, ರೋಗಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಕಸ್ತೂರಬಾ ಆಸ್ಪತ್ರೆಯ ಮುಖ್ಯ ನಿರ್ವಹಣಾಧಿಕಾರಿ ಸಿ.ಜಿ.ಮುತ್ತಣ್ಣ, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಕೆಎಂಸಿ ಮಂಗಳೂರಿನ ವೈದ್ಯಕೀಯ ಅಧೀಕ್ಷಕ ಡಾ.ಆನಂದ ವೇಣುಗೋಪಾಲ್, ನಿರ್ವಹಣಾಧಿಕಾರಿ ಸಗೀರ್ ಸಿದ್ದಿಕಿ, ಇಂಟರ್ವೆನ್ಷನಲ್ ರೇಡಿಯಾಲಜಿಸ್ಟ್ ಡಾ. ಕೀರ್ತಿರಾಜ್ ಇದ್ದರು.

**ಮುಖ್ಯಾಂಶಗಳು**

- ಸುರುಳಿಯಾಕಾರದ ಮೂಲಕ ಚಿಕಿತ್ಸೆ
- ಕ್ಯಾನ್ಸರ್:ಅಪಧಮನಿಗಳ ಮೂಲಕ ಗಡ್ಡೆಗೆ ಔಷಧಿ
- ಇಂಟರ್ವೆನ್ಷನಲ್ ರೇಡಿಯಾಲಜಿ ತಂತ್ರಜ್ಞಾನ

ಉಬ್ಬಿರುವ ರಕ್ತನಾಳಗಳಿಗೆ ಶಸ್ತ್ರಚಿಕಿತ್ಸೆಯಿಲ್ಲದೆ ಚಿಕಿತ್ಸೆ ನೀಡಬಹುದು. ಪ್ರಸವ ನಂತರದ ರಕ್ತಸ್ರಾವಕ್ಕೆ ಎಂಬೋಲೈಸೇಶನ್ ವಿಧಾನಗಳ ಚಿಕಿತ್ಸೆ ಹೆಚ್ಚು ಸಹಕಾರಿ

**ಡಾ.ಎಚ್.ಎಸ್.ಬಲ್ಲಾಳ್**
ಮಾಹೆ ಸಹ ಕುಲಾಧಿಪತಿ

ಉದಯವಾಣಿ ಸುದಿನ

ಮಣಿಪಾಲ
2021
ಡಿಸೆಂಬರ್ 3 ಶುಕ್ರವಾರ

# ಮಣಿಪಾಲ: ಇಂಟರ್ವೆನ್ಶನಲ್ ರೇಡಿಯಾಲಜಿ ವಿಭಾಗ ಉದ್ಘಾಟನೆ

**ಮಣಿಪಾಲ, ಡಿ. 2:** ಮಾಹೆ ವಿ.ವಿಯ ಸಹ ಕುಲಾಧಿಪತಿ ಡಾ। ಎಚ್.ಎಸ್. ಬಲ್ಲಾಳ್ ಅವರು ಗುರುವಾರ ಮಣಿಪಾಲ ಕೆಎಂಸಿ ಮತ್ತು ಆಸ್ಪತ್ರೆಯಲ್ಲಿ ಇಂಟರ್ವೆನ್ಶನಲ್ ರೇಡಿಯಾಲಜಿ ವಿಭಾಗವನ್ನು ಉದ್ಘಾಟಿಸಿದರು.

ಇಂಟರ್ವೆನ್ಶನಲ್ ರೇಡಿಯಾಲಜಿ (ಐಆರ್) ಎನ್ನುವುದು ವಿಕಿರಣಶಾಸ್ತ್ರದ ವೈದ್ಯಕೀಯ ವಿಶೇಷತೆಯಾಗಿದೆ. ಪ್ರತಿಯೊಂದು ಅಂಗ ವ್ಯವಸ್ಥೆಯಲ್ಲಿನ ರೋಗಗಳನ್ನು ಪತ್ತೆಹಚ್ಚಲು ಮತ್ತು ಚಿಕಿತ್ಸೆ ನೀಡಲು ಇದು ಅನುಕೂಲವಾಗಲಿದೆ. ಐಆರ್ ತಂತ್ರಗಳ ಮುಖ್ಯ ಪ್ರಯೋಜನಗಳೆಂದರೆ ಅವು ದೇಹದ ಆಳವಾದ ರಚನೆಗಳನ್ನು ದೇಹದ ರಂಧ್ರ ಅಥವಾ ಸಣ್ಣ ಸೂಜಿಗಳು ಮತ್ತು ತಂತಿಗಳನ್ನು ಬಳಸಿಕೊಂಡು ಸಣ್ಣ ಛೇದನದ ಮೂಲಕ ತಲುಪಬಲ್ಲುದು ಎಂದು ಡಾ।ಬಲ್ಲಾಳ್ ಹೇಳಿದರು.

ರೇಡಿಯಾಲಜಿ ವಿಭಾಗದ ಮುಖ್ಯಸ್ಥೆ ಡಾ। ಪ್ರಕಾಶಿನಿ ಮಾತನಾಡಿ, ಐಆರ್ ಕಾರ್ಯವಿಧಾನಗಳು ಶಸ್ತ್ರಚಿಕಿತ್ಸೆಗೆ ಪರ್ಯಾಯ ಚಿಕಿತ್ಸೆಯಾಗಿ ವಿಕಸನ ಗೊಂಡಿವೆ. ಇದು ರಕ್ತ ನಷ್ಟ, ತೆರೆದ ಶಸ್ತ್ರಚಿಕಿತ್ಸೆಗಳು, ಶಸ್ತ್ರಚಿಕಿತ್ಸೆಯ ಅನಂತರದ ತೊಡಕುಗಳು ಮತ್ತು ರೋಗದ ತೀವ್ರತೆಯನ್ನು ತಪ್ಪಿಸುತ್ತದೆ. ಸೂಜಿ ಪಂಕ್ಚರ್ ಸೆರೆಬ್ರಲ್ ಸ್ಟ್ರೋಕ್‌ಗಳನ್ನು ಥ್ರಂಬೋಲಿಸಿಸ್‌ನೊಂದಿಗೆ ಚಿಕಿತ್ಸೆ ನೀಡಬಹುದು. ಇದು ರೋಗಿಯ ಸಂಪೂರ್ಣ ಚೇತರಿಕೆಗೆ ಕಾರಣವಾಗುತ್ತದೆ. ಅನ್ಯೂರಿಮ್‌ನಿಂದ ಉಂಟಾಗುವ ಸೆರೆಬ್ರಲ್ ಹೆಮರೇಜ್‌ಗೆ ಸುರುಳಿಯಾಕಾರದ ಮೂಲಕ ಚಿಕಿತ್ಸೆ ನೀಡಬಹುದು



ಮಾಹೆ ಸಹ ಕುಲಾಧಿಪತಿ ಡಾ। ಎಚ್.ಎಸ್.ಬಲ್ಲಾಳ್ ಅವರು ಕೆಎಂಸಿಯಲ್ಲಿ ಇಂಟರ್ವೆನ್ಶನಲ್ ರೇಡಿಯಾಲಜಿ ವಿಭಾಗ ಉದ್ಘಾಟಿಸಿದರು.

ಮತ್ತು ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ತಪ್ಪಿಸಬಹುದು. ಕ್ಯಾನ್ಸರ್‌ಗಳಲ್ಲಿ ಇತ್ತೀಚಿನ ಅತ್ಯಾಧುನಿಕ ಚಿಕಿತ್ಸೆಯಲ್ಲಿ ಔಷಧವನ್ನು ನೇರವಾಗಿ ಅಪಧಮನಿಗಳ ಮೂಲಕ ಗೆಡ್ಡೆಗೆ ತಲುಪಿಸಲಾಗುತ್ತದೆ, ಇದರಿಂದಾಗಿ ವ್ಯವಸ್ಥಿತ ಅಡ್ಡ ಪರಿಣಾಮಗಳನ್ನು ತಪ್ಪಿಸುತ್ತದೆ ಮತ್ತು ಚಿಕಿತ್ಸೆಯ ಪರಿಣಾಮಕಾರಿತ್ವವನ್ನು ಸುಧಾರಿಸುತ್ತದೆ. ಉಬ್ಬಿರುವ ರಕ್ತನಾಳಗಳನ್ನುಶಸ್ತ್ರಚಿಕಿತ್ಸೆಯಿಲ್ಲದೆಚಿಕಿತ್ಸೆನೀಡಬಹುದು, ಇದರಲ್ಲಿ ಇಮೇಜ್ ಮಾರ್ಗದರ್ಶನದಲ್ಲಿ ಹಿಗ್ಗಿದ ರಕ್ತನಾಳಗಳನ್ನು ತೆಗೆದುಹಾಕಲಾಗುತ್ತದೆ. ಶೂನ್ಯ ರಕ್ತನಷ್ಟ ಮತ್ತು ಆಸ್ಪತ್ರೆಯಲ್ಲಿ ಉಳಿದುಕೊಳ್ಳುವ ಅಗತ್ಯವಿಲ್ಲ, ಗರ್ಭಾಶಯದ ಅಪಧಮನಿ ಎಂಬೋಲೈಸೇಶನ್ ಗರ್ಭಾಶಯವನ್ನು ಉಳಿಸುವ ವಿಧಾನವಾಗಿದೆ, ಇದರಲ್ಲಿ ದೊಡ್ಡ ಫೈಬ್ರಾಯ್, ಫೀಡಿನ್, ಎಂಬಾಲೈಸ್ ಮಾಡುವ ಮೂಲಕ ಚಿಕಿತ್ಸೆ ನೀಡಬಹುದು ಎಂದು ವಿವರ ನೀಡಿದರು.

ಆಂತರಿಕ ಅಂಗ ಮತ್ತು ಪ್ರಸವಾನಂತರದ ರಕ್ತಸ್ರಾವದ ಸಂದರ್ಭಗಳಲ್ಲಿ ಜೀವ ಉಳಿಸುವ ಎಂಬೋಲೈಸೇಶನ್ ಕಾರ್ಯವಿಧಾನಗಳನ್ನು ನಡೆಸ ಲಾಗುತ್ತದೆ. ನವೀನ ತಂತ್ರಜ್ಞಾನದಿಂದ ರೋಗಿಗಳಿಗೆ ಅತ್ಯಂತ ಪ್ರಯೋಜನಕಾರಿಯಾದ ಹಲವು ಸುಧಾರಿತ ಕಾರ್ಯವಿಧಾನಗಳನ್ನು ನಿರ್ವಹಿಸುತ್ತೇವೆ. ನಾವು ಅನುಭವಿ ಸಲಹೆಗಾರರೊಂದಿಗೆ ವಿಕಿರಣಶಾಸ್ತ್ರ ವಿಭಾಗದಲ್ಲಿ ಐಆರ್ ವಿಭಾಗವನ್ನು ಸ್ಥಾಪಿಸಿದ್ದೇವೆ ಎಂದರು.

ಕಸ್ತೂರ್ಬಾ ಆಸ್ಪತ್ರೆಯ ಸಿಒಒ ಸಿ.ಜಿ.ಮುತ್ತಣ್ಣ ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ ಕೆಎಂಸಿ ಮಂಗಳೂರಿನ ವೈದ್ಯಕೀಯ ಅಧೀಕ್ಷಕ ಡಾ। ಆನಂದ ವೇಣುಗೋಪಾಲ್, ಮಂಗಳೂರು ವಲಯದ ನಿರ್ವಹಣಾಧಿಕಾರಿ ಸಗೀರ್ ಸಿದ್ದಿಕಿ , ಇಂಟರ್ವೆನ್ಶನಲ್ ರೇಡಿಯಾಲಜಿಸ್ಟ್ ಡಾ। ಕೀರ್ತಿರಾಜ್ ಉಪಸ್ಥಿತರಿದ್ದರು

**Other Links:**

**Public Next:** https://publicnext.com/article/nid/Udupi/Health-and-Fitness/node=569500

**Udupi Bulletin**: https://nammaudupibulletin.com/suddigalu/pradeshika/division-of-interventional-radiology-inaugurated-at-kmc/

**The Canara Post:** https://bit.ly/31p4I3z

**Karavali Xpress**: https://karavalixpress.com/news/kv-3/